

بِسۡمِ اللّٰہِ الرَّحۡمٰنِ الرَّحِیۡم

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್,** ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ 07-02-2020 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّالِّيْنَ۔

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಇಂದು ನಾನು ವಿವರಿಸಲಿರುವ ಬದರಿ ಸಹಾಬಿಯ ಹೆಸರು ಹಝ್ರತ್ ಮುಹಮ್ಮದ್ ಬಿನ್ ಮುಸ್ಲಿಮ(ರ). ಅವರು ಅನ್‌ಸಾರ್‌ಗಳ ಔಸ್ ಗೋತ್ರದವರಾಗಿದ್ದರು ಮತ್ತು ಆದ್ಯ ಕಾಲದಲ್ಲಿ ಮುಸ್ಲಿಮರಾದವರಾಗಿದ್ದರು. ಅವರು ಹಝ್ರತ್ ಮುಸ್‌ಇಬ್ ಬಿನ್ ಉಮೈರರ ಕೈಯ್ಯಲ್ಲಿ ಹಝ್ರತ್ ಸಅದ್ ಬಿನ್ ಮುಆದ್‌ರಿಗಿಂತ ಮೊದಲು ಮುಸ್ಲಿಮರಾದರು. ಹಝ್ರತ್ ಉಬೈದ ಬಿನ್ ಅಲ್ ಜರಾಹ್ ಮದೀನಕ್ಕೆ ಹಿಜ್‌ರತ್ ಮಾಡಿದಾಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರ ಮತ್ತು ಹಝ್ರತ್ ಮುಹಮ್ಮದ್ ಬಿನ್ ಮುಸ್ಲಿಮರ ಮಧ್ಯೆ ಸಹೋದರ ಸಂಬಂಧವನ್ನು ಸ್ಥಾಪಿಸಿದರು. ಕಅಬ್ ಬಿನ್ ಅಶ್ರಫ್ ಮತ್ತು ಅಬೂ ರಾಫಿಅ್ ಸಲಾಮ್ ಬಿನ್ ಅಬೂ ಹಖೀಖ್ ಎಂಬಿಬ್ಬರನ್ನು ಹತ್ಯೆ ಮಾಡಲು ನೇಮಿಸಲ್ಪಟ್ಟವರಲ್ಲಿ ಹಝ್ರತ್ ಮುಹಮ್ಮದ್ ಬಿನ್ ಮುಸ್ಲಿಮ ಸೇರಿದ್ದರು. ಹತರಾದ ಆ ಇಬ್ಬರು ಸಹ ಕಲಹಗಾರರಾದ ದುಷ್ಕರ್ಮಿಗಳಾಗಿದ್ದರು. ಅವರಿಬ್ಬರು ಯಾವಾಗಲೂ ಮುಸ್ಲಿಮರಿಗೆ ಹಾನಿಯುಂಟುಮಾಡಲು ನಿರತರಾಗಿರುತ್ತಿದ್ದರು. ಅವರು ಅನ್ಯರನ್ನೂ ಮುಸ್ಲಿಮರ ಮೇಲೆ ಆಕ್ರಮಣ ಮಾಡಿಸಲು ಪ್ರೇರೇಪಿಸುತ್ತಿದ್ದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಸಹ ಆಕ್ರಮಿಸಲು ಪ್ರಯತ್ನಿಸಿದ್ದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಮುಹಮ್ಮದ್ ಬಿನ್ ಮುಸ್ಲಿಮರನ್ನು ಆ ದುಷ್ಕರ್ಮಿಗಳನ್ನು ಹತ್ಯೆ ಮಾಡಲು ನೇಮಿಸಿದ್ದರು. ಕೆಲವು ಯುದ್ಧಗಳಿಗೆ ಹೋಗುವ ಸಂದರ್ಭದಲ್ಲಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರನ್ನು ಮದೀನದ ಮೇಲ್ವಿಚಾರಕರನ್ನಾಗಿ ನೇಮಿಸಿದ್ದರು. ಹಝ್ರತ್ ಮುಹಮ್ಮದ್ ಬಿನ್ ಮುಸ್ಲಿಮರ ಪುತ್ರರಾದ ಜಅಫರ್, ಅಬ್ದುಲ್ಲಾ, ಸಅದ್, ಅಬ್ದುರ್ರಹ್ಮಾನ್ ಮತ್ತು ಉಮರ್ ಸಹ ಪ್ರವಾದಿವರ್ಯರ ಸಹಾಬಿಗಳಲ್ಲಿ ಸೇರುತ್ತಾರೆ. ಹಝ್ರತ್ ಮುಹಮ್ಮದ್ ಬಿನ್ ಮುಸ್ಲಿಮರು ತಬೂಕ್ ಯುದ್ಧದ ಹೊರತು ಇತರ ಎಲ್ಲಾ ಯುದ್ಧಗಳಲ್ಲಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಭಾಗವಹಿಸಿದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಂದ ಅನುಮತಿ ಪಡೆದು ಅವರು ತಬೂಕ್ ಯುದ್ಧದಲ್ಲಿ ಭಾಗವಹಿಸದೆ ಮದೀನದಲ್ಲಿಯೇ ಇದ್ದರು.

ಇಸ್ಲಾಮಿನ ಶತ್ರುಗಳಾದ, ಮೇಲೆ ಹೇಳಿದ ಇಬ್ಬರು ದುಷ್ಕರ್ಮಿಗಳ ಹತ್ಯೆಯಲ್ಲಿ ಹಝ್ರತ್ ಮುಹಮ್ಮದ್ ಬಿನ್ ಮುಸ್ಲಿಮ ಸೇರಿದ್ದರು. ಹಝ್ರತ್ ಉಬಾದ ಬಿನ್ ಬಶ್‌ರ್‌ರ ಬಗ್ಗೆ ವಿವರಿಸುವಾಗ ಅದರ ಬಗ್ಗೆ ಸಹ ನಾನು ಪ್ರಸ್ತಾಪಿಸಿದ್ದೆನು. ಸ್ವಲ್ಪ ಹೆಚ್ಚಿಗೆ ವಿವರಣೆ ಸಂಕ್ಷಿಪ್ತವಾಗಿ ಈಗ ನೀಡುವೆನು. ಸೀರತ್ ಖಾತಮುನ್ನಬಿಯ್ಯೀನ್‌ನಲ್ಲಿ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬರು ಕಅಬ್ ಬಿನ್ ಅಶ್ರಫ್‌ನ ಹತ್ಯೆಗೆ ಸಂಬಂಧಿಸಿ ಹೀಗೆ ಬರೆದಿದ್ದಾರೆ: ಬದರ್ ಯುದ್ಧವು ಮದೀನದ ಯಹೂದಿಯರ ಹೃದಯದಲ್ಲಿದ್ದ ಹಗೆತನದ ಬಗ್ಗೆ ಬೆಳಕು ಬೀರಿತು. ಅವರ ಹಗೆತನ ಮತ್ತೂ ವರ್ಧಿಸಿತು. ಕಅಬ್ ಬಿನ್ ಅಶ್ರಫ್‌ನ ಹತ್ಯೆ ಅದರದೇ ಒಂದು ಕೊಂಡಿಯಾಗಿತ್ತು. ಕಅಬ್ ಯಹೂದಿ ಧರ್ಮವನ್ನು ಅವಲಂಬಿಸಿದ್ದರೂ ಅವನು ಯಹೂದಿ ವಂಶದವನಾಗಿರಲಿಲ್ಲ. ಅರಬಿಯಾಗಿದ್ದನು. ಅವನ ಪಿತನಾಗಿದ್ದ ಕಅಬ್ ಒಬ್ಬ ಚತುರ, ಚಾಣಾಕ್ಷ ಮನುಷ್ಯನಾಗಿದ್ದನು. ಅವನು ಮದೀನಕ್ಕೆ ಆಗಮಿಸಿ ಯಹೂದಿಯರ ಬನೂ ನಝೀರ್ ಗೋತ್ರದವರೊಂದಿಗೆ ಪ್ರತಿಜ್ಞಾಬದ್ಧನಾದನು. ಅವನು ಎಷ್ಟು ಅಧಿಕಾರ ಮತ್ತು ಪ್ರಭಾವ ಗಳಿಸಿದನೆಂದರೆ ಬನೂ ನಝೀರ್ ಗೋತ್ರದ ಸರ್ವೋನ್ನತ ಮುಖಂಡನಾದ ಅಬೂ ರಾಫಿಅ್ ಬಿನ್ ಅಬಿಲ್ ಹಖೀಖ್ ತನ್ನ ಪುತ್ರಿಯನ್ನು ಅವನಿಗೆ ವಿವಾಹ ಮಾಡಿ ಕೊಟ್ಟನು. ಈ ದಂಪತಿಗಳಿಗೆ ಕಅಬ್ ಜನಿಸಿದನು. ಕಅಬ್ ದೊಡ್ಡವನಾದ ನಂತರ ತನ್ನ ಪಿತನಿಗಿಂತಲೂ ಹೆಚ್ಚಿನ ಸ್ಥಾನ ಗಳಿಸಿದನು. ಅವನನ್ನು ಅರಬ್ ದೇಶದ ಎಲ್ಲಾ ಯಹೂದಿಯರು ತಮ್ಮ ನಾಯಕನಾಗಿ ಗೌರವಿಸಲು ತೊಡಗಿದರು. ನೈತಿಕವಾಗಿ ಅವನು ಅತ್ಯಂತ ಕೊಳಕು ಸ್ವಭಾವ ಹೊಂದಿದವನಾಗಿದ್ದನು. ಗೂಢ ತಂತ್ರಗಳನ್ನು ರೂಪಿಸುವುದರಲ್ಲಿ ಮತ್ತು ವಿಧ್ವಂಸಕ ಕೃತ್ಯಗಳಲ್ಲಿ ಬಹಳ ನೈಪುಣ್ಯ ಗಳಿಸಿದ್ದನು.

ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಮದೀನಕ್ಕೆ ಹಿಜ್‌ರತ್ ಮಾಡಿ ಆಗಮಿಸಿದಾಗ ಕಅಬ್ ಬಿನ್ ಅಶ್ರಫ್ ಇತರ ಯಹೂದಿಯರೊಂದಿಗೆ ಸೇರಿ ಗೂಢಾಲೋಚನೆ ನಡೆಸುತ್ತಿದ್ದನು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮತ್ತು ಯಹೂದಿಯರ ಮಧ್ಯೆ ಪರಸ್ಪರ ಸ್ನೇಹ, ಶಾಂತಿ, ಸಂರಕ್ಷಣೆ ಮತ್ತು ಪ್ರತಿರೋಧಕ್ಕೆ ಸಂಬಂಧಿಸಿ ಸಹಭಾಗಿತ್ವದ ಬಗ್ಗೆ ಲಿಖಿತ ಒಪ್ಪಂದ ಮಾಡಲಾಗಿತ್ತು. ಆದರೆ ಕಅಬನ ಹೃದಯದೊಳಗೆ ದ್ವೇಷ ಮತ್ತು ಹಗೆತನದ ಅಗ್ನಿ ಪ್ರಜ್ವಲಿಸಲು ತೊಡಗಿತ್ತು. ಅವನು ರಹಸ್ಯ ತಂತ್ರಗಳ ಮತ್ತು ರಹಸ್ಯ ಒಕ್ಕೂಟಗಳ ಮೂಲಕ ಇಸ್ಲಾಮ್ ಮತ್ತು ಇಸ್ಲಾಮಿನ ಸ್ಥಾಪಕರ ವಿರುದ್ಧ ವರ್ತಿಸಲು ಪ್ರಾರಂಭಿಸಿದನು. ಬದರ್ ಯುದ್ಧದ ನಂತರ ಅವನ ಹಗೆತನ ಮತ್ತಷ್ಟು ವರ್ಧಿಸಿತು. ಅವನ ವರ್ತನೆ ಅತ್ಯಂತ ಕೆಡುಕುಂಟು ಮಾಡುವಂತಹದು ಮತ್ತು ಅದರಿಂದ ಮುಸ್ಲಿಮರಿಗೆ ಅತ್ಯಂತ ಅಪಾಯಕರ ಸ್ಥಿತಿ ತಲೆದೋರಿತ್ತು. ಬದರ್ ಯುದ್ಧದಲ್ಲಿ ಮುಸ್ಲಿಮರಿಗೆ ಅಸಾಧಾರಣವಾದ ಜಯ ಲಭಿಸಿದಾಗ ಮತ್ತು ಖುರೈಶಿಗಳ ಮುಖಂಡರಲ್ಲಿ ಬಹುತೇಕ ಜನರು

ಹತರಾದಾಗ, ಈ ಹೊಸ ಧರ್ಮ ತಾನಾಗಿ ನಾಶವಾಗುವುದಾಗಿ ಕಾಣುವುದಿಲ್ಲ ಎಂದು ಆತನಿಗೆ ಮನವರಿಕೆಯಾಯಿತು. ಬದರ್ ಯುದ್ಧದ ನಂತರ ಕಅಬ್ ತನ್ನ ಸಂಪೂರ್ಣವಾದ ಪ್ರಯತ್ನವನ್ನು ಇಸ್ಲಾಮನ್ನು ನಾಶಮಾಡಲು ವಿನಿಯೋಗಿಸುವುದಾಗಿ ನಿರ್ಧರಿಸಿದನು.

ಬದರ್ ಯುದ್ಧದಲ್ಲಿ ಗಳಿಸಿದ ಜಯ ಇಸ್ಲಾಮ್ ಧರ್ಮಕ್ಕೆ ತನ್ನ ಊಹೆಗೆ ಅತೀತವಾದ ಶಕ್ತಿಯನ್ನು ನೀಡಿದೆ ಎಂದು ಕಅಬ್‌ನಿಗೆ ದೃಢವಾಗಿ ಮನವರಿಕೆಯಾಯಿತು. ಅವನು ಕೂಡಲೇ ಮಕ್ಕದ ಕಡೆಗೆ ಪ್ರಯಾಣಿಸಿದನು. ಅವನು ಮಕ್ಕದಲ್ಲಿ ತನ್ನ ವಾಕ್ಚಾತುರ್ಯದಿಂದ ಮತ್ತು ಕವಿತೆಗಳನ್ನು ಹಾಡುವ ಮೂಲಕ ಖುರೈಶಿಗಳ ಹೃದಯಗಳಲ್ಲಿ ಉರಿಯುತ್ತಿದ್ದ ಅಗ್ನಿಯನ್ನು ಇನ್ನಷ್ಟು ಪ್ರಜ್ವಲಿಸಿದನು. ಅವರ ಹೃದಯಗಳಲ್ಲಿ ಮುಸ್ಲಿಮರ ರಕ್ತವನ್ನು ಹೀರುವ ನಿವಾರಿಸಲಾಗದ ದಾಹವನ್ನು ಸೃಷ್ಟಿಸಿದನು. ಅವರ ಎದೆಯಲ್ಲಿ ಪ್ರತೀಕಾರ ಮಾಡುವ ಮತ್ತು ಹಗೆತನದ ಭಾವನೆಗಳನ್ನು ತುಂಬಿಸಿದನು. ಕಅಬನ ಉತ್ತೇಜಕ ಮಾತುಗಳಿಂದ ಅವರ ಭಾವನೆಗಳಲ್ಲಿ ಅತ್ಯುನ್ನತ ಮಟ್ಟದ ಮಿಂಚು ಉದ್ಭವಿಸಿತು. ಕಅಬನು ಅವರನ್ನು ಕಅಬದ ಅಂಗಳಕ್ಕೆ ಕರೆದುಕೊಂಡು ಹೋಗಿ ಕಅಬಕ್ಕೆ ಹೊದಿಸಿದ ಪರದೆಯನ್ನು ಅವರ ಕೈಯಲ್ಲಿ ಕೊಟ್ಟು ಅವರು ಹೀಗೆ ಆಣೆ ಹಾಕಿಸುವಂತೆ ಮಾಡಿದನು: ಇಸ್ಲಾಮ್ ಮತ್ತು ಇಸ್ಲಾಮಿನ ಸ್ಥಾಪಕರನ್ನು ಲೋಕದಿಂದ ನಾಶಮಾಡುವ ತನಕ ನಾವು ವಿಶ್ರಾಂತಿ ಪಡೆಯಲಾರೆವು ಎಂದು.

ಅನಂತರ ಆ ದುಷ್ಟನು ಅರಬ್ ದೇಶದ ಇತರ ಗೋತ್ರಗಳ ಕಡೆಗೆ ಒಂದರ ನಂತರ ಇನ್ನೊಂದರಂತೆ ಹೋದನು. ಅಲ್ಲಿ ಸುತ್ತಾಡಿ ಮುಸ್ಲಿಮರ ವಿರುದ್ಧ ಜನರನ್ನು ಉತ್ತೇಜಿಸಿದನು. ಅನಂತರ ಮದೀನಕ್ಕೆ ಮರಳಿ ಬಂದು ಮುಸ್ಲಿಮ್ ಮಹಿಳೆಯರ ವಿರುದ್ಧ ಅಶ್ಲೀಲ ಹಾಡುಗಳನ್ನು ಹಾಡಿದನು. ಉದ್ರೇಕಿಸುವ ತಶ್‌ಬೀಬ್ ಎಂಬ ಆ ಹಾಡುಗಳಲ್ಲಿ ಮುಸ್ಲಿಮ್ ಮಹಿಳೆಯರನ್ನು ಅತ್ಯಂತ ಕೊಳಕು ಅಶ್ಲೀಲ ರೀತಿಯಲ್ಲಿ ವರ್ಣಿಸಿದನು. ಅವನು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕುಟುಂಬದ ಮಹಿಳೆಯರನ್ನು ಸಹ ಅಶ್ಲೀಲ ಹಾಡುಗಳಿಗೆ ಗುರಿಪಡಿಸದೆ ಬಿಡಲಿಲ್ಲ. ದೇಶದಲ್ಲಿ ಆ ಪದ್ಯಗಳ ಬಗ್ಗೆ ಜನರು ಚರ್ಚಿಸುವಂತೆ ಮಾಡಿದನು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ವಧಿಸಲು ಸಹ ಅವನು ಗೂಢಾಲೋಚನೆ ಮಾಡಿದ್ದನು. ಒಂದು ಸತ್ಕಾರದ ನೆಪದಲ್ಲಿ ತನ್ನ ಮನೆಗೆ ಕರೆದು ಕೆಲವು ಯುವ ಯಹೂದಿಯರಿಂದ ಅವರನ್ನು ಹತ್ಯೆ ಮಾಡಿಸಲು ನಿರ್ಧರಿಸಿದ್ದನು. ಆದರೆ ಅಲ್ಲಾಹನ ಅನುಗ್ರಹದಿಂದ ತಕ್ಕ ಸಮಯದಲ್ಲಿ ಅದರ ಬಗ್ಗೆ ಸಮಾಚಾರ ಲಭಿಸಿದ ಕಾರಣ ಅವನ ಗೂಢತಂತ್ರ ಫಲಕಾರಿಯಾಗಲಿಲ್ಲ.

ಕಅಬನ ವಿರುದ್ಧ ಪ್ರತಿಜ್ಞಾ ಭಂಗ, ವಿದ್ರೋಹ, ಯುದ್ಧ ಮಾಡಲು ಪ್ರೋತ್ಸಾಹ, ಹಿಂಸಾಚಾರ, ಅಶ್ಲೀಲ ಹೇಳಿಕೆ, ಕೊಲೆಯತ್ನ ಮೊದಲಾದ ದೋಷಾರೋಪಗಳು ಸಾಬೀತಾದಾಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕಅಬ್ ಬಿನ್ ಅಶ್ರಫನು ಅವನ ಕುಕೃತ್ಯಗಳ ಕಾರಣದಿಂದ ವಧಾರ್ಹನೆಂದು ವಿಧಿಸಿದರು.

ಕಅಬನ ಕುಕೃತ್ಯಗಳ ಕಾರಣ ಮದೀನದಲ್ಲಿ ಎಂತಹ ಪರಿಸ್ಥಿತಿ ತಲೆದೋರಿತ್ತೆಂದರೆ ಅವನ ವಿರುದ್ಧ ಬಹಿರಂಗವಾಗಿ ವಧಾರ್ಹನೆಂದು ಪ್ರಕಟಿಸಿ ಅವನನ್ನು ವಧಿಸಿದ್ದರೆ ಮದೀನದಲ್ಲಿ ಅಪಾಯಕರವಾದ ಅಂತಃಕಲಹ ಪ್ರಾರಂಭವಾಗುವ ಭಯವಿದ್ದಿತು. ಆ ಅಂತಃಕಲಹದಲ್ಲಿ ಬಹಳ ರಕ್ತಪಾತವಾಗುತ್ತಿತ್ತು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕೋಮುಗಳ ಮಧ್ಯೆ ರಕ್ತಪಾತವಾಗುವುದನ್ನು ತಡೆಯಲು ಪ್ರತಿಯೊಂದು ರೀತಿಯಲ್ಲಿ ಪ್ರಯತ್ನಿಸಲು ಬಯಸಿದ್ದರು. ಆದುದರಿಂದ ಕಅಬನನ್ನು ಬಹಿರಂಗವಾಗಿ ಕೊಲ್ಲಬಾರದು ಎಂದು ಅವರು ಮಾರ್ಗದರ್ಶನ ನೀಡಿದರು. ಕೆಲವು ಜನರೊಂದಿಗೆ ರಹಸ್ಯವಾಗಿ ಅವನನ್ನು ಹತ್ಯೆ ಮಾಡಲು ನಿರ್ದೇಶಿಸಿದರು. ಔಸ್ ಗೋತ್ರದ ನಿಷ್ಠಾವಂತ ಸಹಾಬಿ ಮುಹಮ್ಮದ್ ಬಿನ್ ಮುಸ್ಲಿಮಗೆ ಈ ಕೆಲಸ ವಹಿಸಿಕೊಟ್ಟರು. ಹತ್ಯೆಯ ರೀತಿಯ ಬಗ್ಗೆ ಔಸ್ ಗೋತ್ರದ ನಾಯಕ ಸಅದ್ ಬಿನ್ ಮುಆಝುರಿಂದ ಸಲಹೆ ಪಡೆಯಲು ಹೇಳಿದರು. ಹಝ್ರತ್ ಮುಹಮ್ಮದ್ ಬಿನ್ ಮುಸ್ಲಿಮ ಹೇಳಿದರು: ಯಾ ರಸೂಲುಲ್ಲಾಹ್, ರಹಸ್ಯವಾಗಿ ಹತ್ಯೆ ಮಾಡಲು ಏನಾದರೂ ಉಪಾಯ ಮಾಡಿ ಅವನನ್ನು ಮನೆಯಿಂದ ಹೊರಗೆ ಬರುವಂತೆ ಮಾಡಬೇಕಾಗುತ್ತದೆ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅದಕ್ಕೆ ಒಪ್ಪಿಗೆ ನೀಡಿದರು. ಹಾಗೆ ಹಝ್ರತ್ ಸಅದ್ ಬಿನ್ ಮುಆಝುರಿಂದ ಸಲಹೆ ಪಡೆದು ಹಝ್ರತ್ ಮುಹಮ್ಮದ್ ಬಿನ್ ಮುಸ್ಲಿಮರು ತನ್ನೊಂದಿಗೆ ಅಬೂ ನಾಯಿಲ ಮತ್ತು ಇತರ ಎರಡು ಮೂರು ಸಹಾಬರನ್ನು ಕರೆದುಕೊಂಡು ಕಅಬನ ಮನೆಗೆ ಹೋದರು. ಕಅಬನನ್ನು ಅವನ ಮನೆಯೊಳಗಿನಿಂದ ಕರೆದು ಹೇಳಿದರು: ನಮ್ಮ ಯಜಮಾನರಾದ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ನಮ್ಮಿಂದ ಸದಖವಾಗಿ ಹಣ ಕೇಳುತ್ತಿದ್ದಾರೆ. ಆದರೆ ನಾವು ಬರಿಗೈಯಲ್ಲಿದ್ದೇವೆ. ನೀವು ನಮಗೆ ಉಪಕಾರ ಮಾಡಿ ಸ್ವಲ್ಪ ಹಣ ಸಾಲವಾಗಿ ಕೊಡುವಿರೋ? ಈ ಮಾತು ಆಲಿಸಿ ಕಅಬ್ ಸಂತೋಷದಿಂದ ನೆಗೆದನು. ಅವನು ಹೇಳಿದನು: ಅಲ್ಲಾಹನಾಣೆ ನೀವು ಅವನ ಬಗ್ಗೆ ಬೇಸರ ಹೊಂದಿ ಅವನಿಂದ ದೂರ ಸರಿಯುವ ಕಾಲ ಸಮೀಪವಾಗಿದೆ. ಹಝ್ರತ್ ಮುಹಮ್ಮದ್ ಬಿನ್ ಮುಸ್ಲಿಮ ಅವನಿಗೆ ಹೀಗೆ ಉತ್ತರ ನೀಡಿದರು: ನಾವು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಅನುಸರಿಸುವವರಾಗಿದ್ದೇವೆ. ನಾವು ನಿಮ್ಮ ಬಳಿಗೆ ಬಂದ ಕೆಲಸದ ಬಗ್ಗೆ ಹೇಳಿರಿ. ನೀವು ಸಾಲ ಕೊಡುವಿರೋ ಇಲ್ಲವೋ? ಕಅಬ್ ಹೇಳಿದನು: ಸಾಲ ಕೊಡುವೆ. ಆದರೆ ಏನನ್ನಾದರೂ ಒತ್ತೆ ಇಡಬೇಕು. ಮುಹಮ್ಮದ್ ಬಿನ್ ಮುಸ್ಲಿಮ ಕೇಳಿದರು: ಏನನ್ನು ಒತ್ತೆ ಇಡಬೇಕು? ಆ ದುಷ್ಟ ಹೇಳಿದನು: ನಿಮ್ಮ ಹೆಂಗಸರನ್ನು ಒತ್ತೆ ಇರಿಸಿರಿ. ಹಝ್ರತ್ ಮುಹಮ್ಮದ್ ಬಿನ್ ಮುಸ್ಲಿಮ ಸಿಟ್ಟನ್ನು ತಗ್ಗಿಸಿ ಹೇಳಿದರು: ನಿಮ್ಮಂತಹ ವ್ಯಕ್ತಿಯ ಬಳಿ ನಮ್ಮ ಹೆಂಗಸರನ್ನು ಒತ್ತೆ ಇರಿಸುವುದು ಹೇಗೆ? ಅಗ ಕಅಬ್ ಹೇಳಿದನು: ಹಾಗಾದರೆ ನಿಮ್ಮ ಪುತ್ರರನ್ನು ಒತ್ತೆ ಇರಿಸಿರಿ. ಹಝ್ರತ್ ಮುಹಮ್ಮದ್ ಬಿನ್ ಮುಸ್ಲಿಮ ಹೇಳಿದರು: ಇದು ಸಹ ಸಾಧ್ಯವಿಲ್ಲ. ನಾವು ಅರಬ್ ಜನತೆಯ ಲೇವಡಿಯನ್ನು ನಮ್ಮ ತಲೆಯಲ್ಲಿ ಹೊತ್ತುಕೊಳ್ಳಲಾರೆವು. ಆದರೆ ನೀವು ನಮಗೆ ಉಪಕಾರ ಮಾಡುವುದಾದರೆ ನಮ್ಮ ಆಯುಧಗಳನ್ನು ಒತ್ತೆ ಇರಿಸುವೆವು. ಕಅಬ್ ಒಪ್ಪಿಗೆ ಸೂಚಿಸಿದನು. ಹಝ್ರತ್ ಮುಹಮ್ಮದ್ ಬಿನ್ ಮುಸ್ಲಿಮ ಮತ್ತು ಅವರ ಸಂಗಡಿಗರು ತಾವು ರಾತ್ರಿ ಅವನ ಬಳಿಗೆ ಬರುವುದಾಗಿ ಹೇಳಿ ಮರಳಿ ಹೋದರು. ರಾತ್ರಿ ಅವರು ಆಯುಧಗಳನ್ನು ತೆಗೆದುಕೊಂಡು ಕಅಬನ ಮನೆಗೆ ಹೋದರು. ಕಅಬನನ್ನು ಮನೆಯ ಹೊರಗೆ ಕರೆದು ಅವನೊಂದಿಗೆ ಮಾತನಾಡುತ್ತಾ ಒಂದು ಕಡೆಗೆ ಕರೆದುಕೊಂಡು ಹೋಗಿ ಅಲ್ಲಿ

ಆತನನ್ನು ಕೊಂದರು. ಮುಹಮ್ಮದ್ ಬಿನ್ ಮುಸ್ಲಿಮ ಮತ್ತು ಸಂಗಡಿಗರು ಅಲ್ಲಿಂದ ಬೇಗನೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ಹೋಗಿ ಆ ಹತ್ಯೆ ಬಗ್ಗೆ ತಿಳಿಸಿದರು.

ಕಅಬನು ಹತ್ಯೆ ಮಾಡಲ್ಪಟ್ಟನೆಂಬ ಸಮಾಚಾರ ಬಹಿರಂಗವಾದಾಗ ನಗರದಲ್ಲಿ ಆತಂಕದ ಪರಿಸ್ಥಿತಿ ತಲೆದೋರಿತು. ಯಹೂದಿಯರು ಬಹಳ ಉದ್ವೇಗಭರಿತರಾದರು. ಬೆಳಗ್ಗೆ ಯಹೂದಿಯರ ಒಂದು ಪ್ರತಿನಿಧಿ ಸಂಘ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ಬಂದು ತಮ್ಮ ನಾಯಕ ಕಅಬನನ್ನು ಹತ್ಯೆ ಮಾಡಲಾಗಿದೆ ಎಂದು ದೂರಿತ್ತರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಅವರ ಮಾತುಗಳನ್ನು ಆಲಿಸಿದ ನಂತರ ಕಅಬ್‌ನ ಅಪರಾಧಗಳನ್ನು ಒಂದೊಂದಾಗಿ ವಿವರಿಸಿ ಅವರಿಗೆ ಹೇಳಿದರು. ಕಅಬನು ಮಾಡಿದ ಒಪ್ಪಂದದ ಉಲ್ಲಂಘನೆ, ಪಿತೂರಿ, ಅಶ್ಲೀಲ ಮಾತುಗಳ ಪ್ರಚಾರ, ವಧಿಸಲು ಗೂಢಾಲೋಚನೆ ಮಾಡಿದುದು ಮೊದಲಾದುವುಗಳನ್ನು ಸಂಕ್ಷಿಪ್ತವಾಗಿ ಅವರಿಗೆ ನೆನಪಿಸಿಕೊಟ್ಟರು. ಆಗ ಆ ಯಹೂದಿಯರು ಹೆದರಿಕೊಂಡು ಮೌನವನ್ನು ಅವಲಂಬಿಸಿದರು. ಅನಂತರ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಇನ್ನು ಮುಂದೆಯಾದರೂ ನೀವು ಶಾಂತಿ ಮತ್ತು ಸೌಹಾರ್ದದಿಂದ ಜೀವಿಸಿರಿ. ಹಗೆತನ ಮತ್ತು ಪಿತೂರಿಯ ಬೀಜ ಬಿತ್ತಬೇಡಿರಿ ಎಂದು ಹೇಳಿದರು. ಹಾಗೆ ಯಹೂದಿಯರ ಒಪ್ಪಿಗೆ ಪಡೆದು ಮುಂದಿನ ಕಾಲಕ್ಕೆ ಅನ್ವಯಿಸುವ ಒಂದು ಹೊಸ ಒಪ್ಪಂದ ಪತ್ರ ಬರೆಯಲಾಯಿತು. ಯಹೂದಿಯರು ಮುಸ್ಲಿಮರೊಂದಿಗೆ ಶಾಂತಿ ಮತ್ತು ಸೌಹಾರ್ದದಿಂದ ಜೀವಿಸುವ ಬಗ್ಗೆ ಮತ್ತು ಪಿತೂರಿಯ ವಿಧಾನಗಳನ್ನು ತ್ಯಜಿಸುವ ಬಗ್ಗೆ ಹೊಸದಾಗಿ ವಾಗ್ದಾನ ಮಾಡಿದರು. ಕಅಬನು ಅಪರಾಧಿಯಾಗಿರದಿದ್ದರೆ ಯಹೂದಿಯರು ಇಷ್ಟು ಸುಲಭವಾಗಿ ಹೊಸ ಒಪ್ಪಂದ ಮಾಡುತ್ತಿರಲಿಲ್ಲ. ಅವನ ಹತ್ಯೆಯ ಬಗ್ಗೆ ಮೌನವಾಗಿರುತ್ತಿರಲೂ ಇಲ್ಲ. ಅವರ ಹೃದಯಗಳು ಕಅಬನು ಶಿಕ್ಷೆಗೆ ಅರ್ಹನಾಗಿದ್ದನೆಂದು ಮನವರಿಕೆ ಮಾಡಿತ್ತು.

ಕಅಬ್ ಬಿನ್ ಅಶ್ರಫನ ಹತ್ಯೆ ಬಗ್ಗೆ ಕೆಲವು ಪಾಶ್ಚಿಮಾತ್ಯ ಚರಿತ್ರೆಗಾರರು ಬಹಳ ಹೆಚ್ಚು ಬರೆದಿದ್ದಾರೆ. ಅದು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ವ್ಯಕ್ತಿತ್ವದ ಮೇಲಿರುವ ಒಂದು ಕಪ್ಪು ಚುಕ್ಕೆ ಎಂದು ಪ್ರಕಟಿಸಿ ಆ ಹತ್ಯೆಯ ಬಗ್ಗೆ ಆಕ್ಷೇಪಗಳನ್ನು ಮಾಡಿದ್ದಾರೆ. ಆದರೆ ಮೊದಲು ನೋಡಬೇಕಾದುದೇನೆಂದರೆ ಆ ಹತ್ಯೆ ಧರ್ಮ ಬದ್ಧವಾಗಿತ್ತೇ ಎಂಬುದನ್ನಾಗಿದೆ. ಎರಡನೆಯದಾಗಿ ಹತ್ಯೆಯ ವಿಧಾನ ಸರಿಯಾಗಿತ್ತೇ ಎಂಬುದನ್ನಾಗಿದೆ. ನೆನಪಿಡಬೇಕಾದುದೇನೆಂದರೆ ಕಅಬ್ ಬಿನ್ ಅಶ್ರಫ್, ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಕ್ರಮಬದ್ಧವಾಗಿ ಶಾಂತಿ ಮತ್ತು ಸುರಕ್ಷೆಯ ಒಪ್ಪಂದ ಮಾಡಿದ್ದನು. ಮುಸ್ಲಿಮರ ವಿರುದ್ಧ ಕೆಲಸ ಮಾಡುವುದಿಲ್ಲ ಎಂದು ಒಪ್ಪಿಕೊಂಡಿದ್ದನಲ್ಲದೆ ಬಾಹ್ಯ ಶತ್ರುಗಳು ಮುಸ್ಲಿಮರನ್ನು ಆಕ್ರಮಿಸಲು ಬಂದರೆ ಮುಸ್ಲಿಮರಿಗೆ ಸಹಾಯವನ್ನು ಮಾಡುವುದಾಗಿ ಸಹ ಒಪ್ಪಿಕೊಂಡಿದ್ದನು. ಮುಸ್ಲಿಮರೊಂದಿಗೆ ಸ್ನೇಹ ಸಂಬಂಧ ಹೊಂದುವುದಾಗಿ ವಾಗ್ದಾನ ಮಾಡಿದ್ದನು. ಆದರೆ ಕಅಬನು ಎಲ್ಲಾ ಒಪ್ಪಂದಗಳನ್ನು ಕಡೆಗಣಿಸಿ ಮುಸ್ಲಿಮರ ವಿರುದ್ಧ ದ್ರೋಹವೆಸಗಿದನು. ಮಾತ್ರವಲ್ಲ ವಾಸ್ತವಿಕವಾಗಿ ಆ ಕಾಲದ ಆಡಳಿತೆ ವ್ಯವಸ್ಥೆ ವಿರುದ್ಧ ವಿದ್ರೋಹ ಮಾಡಿದ್ದನು. ಇಂದಿನ ಕಾಲದ ನಾಗರಿಕ ಸರಕಾರಗಳು ವಿದ್ರೋಹ, ವಿಧ್ವಂಸಕ ಕೃತ್ಯಗಳಿಗೂ, ಹತ್ಯೆ ಮಾಡಲು ಗೂಢಾಲೋಚನೆ ನಡೆಸುವುದಕ್ಕೂ ಅಪರಾಧಿಗಳಿಗೆ ಮರಣದಂಡನೆ ನೀಡುತ್ತಾ ಇಲ್ಲವೆ?

ಕಅಬನನ್ನು ಕೊಲೆ ಮಾಡಿದ ರೀತಿ ಸರಿಯಾಗಿತ್ತೇ ಎಂಬುದಕ್ಕೆ ಉತ್ತರವಾಗಿ ಹಝ್ರತ್ ಬಶೀರ್ ಅಹ್ಮದ್ ಸಾಹಿಬ್ ಹೀಗೆ ಹೇಳುತ್ತಾರೆ: ಆ ಕಾಲದಲ್ಲಿ ಅರಬ್ ದೇಶದಲ್ಲಿ ವ್ಯವಸ್ಥಿತವಾದ ಸರಕಾರವಿರಲಿಲ್ಲ. ಪ್ರತಿಯೊಬ್ಬ ವ್ಯಕ್ತಿ ಮತ್ತು ಪ್ರತಿಯೊಂದು ಗೋತ್ರ ಸ್ವತಂತ್ರವಾಗಿ ವರ್ತಿಸುತ್ತಿದ್ದವು. ಅಂತಹ ಸ್ಥಿತಿಯಲ್ಲಿ ಕಅಬನ ವಿರುದ್ಧ ಮೊಕದ್ದಮೆ ದಾಖಲಿಸಿ ನ್ಯಾಯಾಲಯದಿಂದ ಶಿಕ್ಷೆಯ ಆಜ್ಞೆ ಗಳಿಸಲು ಸಾಧ್ಯವಿರಲಿಲ್ಲ. ನೆನಪಿಡಬೇಕಾದುದೇನೆಂದರೆ ಹಿಜ್‌ರತ್ ನಂತರ ಮದೀನದಲ್ಲಿ ಮುಸ್ಲಿಮರು ಮತ್ತು ಯಹೂದಿಯರ ಮಧ್ಯೆ ಮಾಡಲ್ಪಟ್ಟ ಒಪ್ಪಂದದ ಪ್ರಕಾರ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಕೇವಲ ಒಬ್ಬ ಸಾಮಾನ್ಯ ಪ್ರಜೆಯ ಸ್ಥಾನವನ್ನಲ್ಲ ಅವರು ಹೊಂದಿದ್ದುದು. ಅವರು ಆ ನಗರ ಪ್ರಜಾಪ್ರಭುತ್ವದ ಅಧ್ಯಕ್ಷರಾಗಿ ಗಣಿಸಲ್ಪಟ್ಟಿದ್ದರು. ಅವರಿಗೆ ಎಲ್ಲಾ ಜಗಳಗಳ ಬಗ್ಗೆಯೂ ರಾಜಕೀಯ ವಿಷಯಗಳ ಬಗ್ಗೆಯೂ ತನಗೆ ಯೋಗ್ಯವೆಂದು ತೋರುವ ತೀರ್ಮಾನ ಕೈಗೊಳ್ಳಬಹುದು ಎಂದು ಅವರಿಗೆ ಅಧಿಕಾರ ನೀಡಲಾಗಿತ್ತು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ದೇಶದಲ್ಲಿ ಶಾಂತಿ ಸ್ಥಾಪಿಸಲು ಮತ್ತು ಕಅಬನ ಪಿತೂರಿಗಳ ಕಾರಣ ಅವನು ವಧಾರ್ಹನೆಂದು ವಿಧಿಸಿದರು.

ಇನ್ನೊಂದು ಆಕ್ಷೇಪ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತನ್ನ ಸಹಾಬರಿಗೆ ಸುಳ್ಳು ಹೇಳಲು ಮತ್ತು ಮೋಸ ಮಾಡಲು ಅನುಮತಿ ನೀಡಿದರು ಎಂದು. ಈ ಆಕ್ಷೇಪ ತಪ್ಪಾಗಿವೆ. ಹದೀಸಿನಲ್ಲಿರುವ ಸತ್ಯವಾದ ವರದಿಗಳು ಈ ಆಕ್ಷೇಪವನ್ನು ಅಲ್ಲಗಳೆಯುತ್ತವೆ. ಬುಖಾರಿಯ ಹದೀಸು ಗ್ರಂಥದಲ್ಲಿ ಹೀಗೆ ವರದಿಯಾಗಿದೆ: ಹಝ್ರತ್ ಮುಹಮ್ಮದ್ ಬಿನ್ ಮುಸ್ಲಿಮ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಹೀಗೆ ಹೇಳಿದ್ದರು: ಕಅಬನನ್ನು ರಹಸ್ಯವಾಗಿ ಕೊಲೆ ಮಾಡಲು ಏನನ್ನಾದರೂ ಹೇಳಬೇಕಾಗಬಹುದು ಎಂದು. ಆಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಆ ರಹಸ್ಯ ಹತ್ಯೆಯಿಂದ ದೊರಕಬಹುದಾದ ಬೃಹತ್ತಾದ ಒಳಿತನ್ನು ಪರಿಗಣಿಸಿ 'ಹೌದು' ಎಂದು ಮಾತ್ರ ಹೇಳಿದ್ದರು. ಆ ಸಂದರ್ಭದಲ್ಲಿ ಅದಕ್ಕಿಂತ ಹೆಚ್ಚಾಗಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಾಗಲಿ ಹಝ್ರತ್ ಮುಹಮ್ಮದ್ ಬಿನ್ ಮುಸ್ಲಿಮರಾಗಲಿ ಏನನ್ನೂ ಹೇಳಿರಲಿಲ್ಲ. ಯುದ್ಧದ ಸಂದರ್ಭಗಳಲ್ಲಿ ಗೂಢಚಾರರು ತಮ್ಮ ಕೃತ್ಯ ನಿರ್ವಹಿಸಲು ಎಂತಹ ಮಾತುಗಳನ್ನು ಹೇಳುತ್ತಾರೆಂದರೆ ಅವುಗಳ ಬಗ್ಗೆ ವಿವೇಕಶಾಲಿಗಳು ಎಂದೂ ಆಕ್ಷೇಪ ಪ್ರಕಟಿಸುವುದಿಲ್ಲ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪರಿಶುದ್ಧತೆಗೆ ಕಳಂಕ ತಲೆದೋರುವಂತಹ ಏನೂ ಅಲ್ಲಿ ಸಂಭವಿಸಲಿಲ್ಲ.

ಕೆಲವರು ಹೀಗೆ ಪ್ರಶ್ನಿಸಿದ್ದಾರೆ – ಯುದ್ಧದಲ್ಲಿ ಸುಳ್ಳು ಹೇಳುವುದು, ಮೋಸ ಮಾಡುವುದು ಧರ್ಮಬದ್ಧವೇ? ಕೆಲವು ಹದೀಸುಗಳಲ್ಲಿ ಹೀಗೆ ವರದಿಯಾಗಿದೆ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳುತ್ತಾ ಇದ್ದರು **ಅಲ್ ಹರ್‌ಬು ಖದ್‌ಅ** ಯುದ್ಧ ಒಂದು ಮೋಸ ಕೃತ್ಯವಾಗಿದೆ ಎಂದು.

ಈ ಹದೀಸಿನಿಂದ (ನಊದುಬಿಲ್ಲಾಹ್) ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಯುದ್ಧದಲ್ಲಿ ಮೋಸ ಮಾಡಲು ಅನುಮತಿ ನೀಡಿದ್ದಾರೆ ಎಂದು ವ್ಯಾಖ್ಯಾನಿಸಲಾಗುತ್ತದೆ. ಒಂದನೆಯದಾಗಿ, **ಅಲ್ ಹರ್‌ಬು ಖದ್‌ಅ** ಎಂಬುದರ ಅರ್ಥ ಯುದ್ಧದಲ್ಲಿ ಮೋಸ ಮಾಡಬಹುದು ಎಂದಲ್ಲ. ಅದರ ಅರ್ಥ **ಯುದ್ಧ ಸ್ವತಃ ಒಂದು ಮೋಸಗಾರಿಕೆಯಾಗಿದೆ** ಎಂದು ಮಾತ್ರ. ಇನ್ನೊಂದು ಹದೀಸು ಹೀಗಿದೆ: **ಸುಮ್ಮಿಯಲ್ ಹರ್‌ಬು ಖದ್‌ಅ** ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಯುದ್ಧವನ್ನು ಮೋಸಗಾರಿಕೆ ಎಂದು ಹೆಸರಿಸಿದರು. ಈ ಎರಡು ಹದೀಸುಗಳನ್ನು ಒಟ್ಟಿಗೆ ಪರಾಂಬರಿಸುವಾಗ, ಯುದ್ಧದಲ್ಲಿ ಮೋಸಗಾರಿಕೆಯಿಂದ ವರ್ತಿಸುವುದು ಧರ್ಮಬದ್ಧವೆಂದು ಅವರು ಹೇಳಿರಲಿಲ್ಲ. ಬದಲಾಗಿ ಅವರು ಹೇಳಿದುದು ಯುದ್ಧವೇ ಒಂದು ಮೋಸದ ಕೃತ್ಯ ಎಂದು.

ಯುದ್ಧ ತಂತ್ರಗಳು ವಿವಿಧ ರೀತಿಗಳಲ್ಲಿ ಇರುತ್ತವೆ. ಸಹೀಹ್ ಹದೀಸುಗಳಲ್ಲಿ ಹೀಗೆ ವರದಿಯಾಗಿದೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಯುದ್ಧಕ್ಕೆ ಹೊರಡುವಾಗ ಸಾಮಾನ್ಯವಾಗಿ ತಾವು ಉದ್ದೇಶಿಸಿದ ಲಕ್ಷ್ಯ ಸ್ಥಳ ಯಾವುದೆಂದು ಬಹಿರಂಗಪಡಿಸುತ್ತಿರಲಿಲ್ಲ. ಕೆಲವು ಸಾರಿ ಅವರು ದಕ್ಷಿಣದ ಕಡೆಗೆ ಹೋಗಬೇಕಾಗಿದ್ದಾಗ ಮೊದಲು ಅವರು ಉತ್ತರಾಭಿಮುಖವಾಗಿ ಸಾಗಿ ಅನಂತರ ಸುತ್ತಿ ಬಳಸಿ ದಕ್ಷಿಣದ ಕಡೆಗೆ ಹೋಗುತ್ತಿದ್ದರು. ಯಾರಾದರೂ ನೀವೆಲ್ಲಿಂದ ಬಂದಿರಿ ಎಂದು ಕೇಳಿದಾಗ ಮದೀನದ ಹೆಸರು ಹೇಳದೆ ಮದೀನದಿಂದ ದೂರದ ಅಥವಾ ಮದೀನಕ್ಕೆ ಸಮೀಪದ ಬೇರೆ ಯಾವುದಾದರೂ ಸ್ಥಳದ ಹೆಸರು ಹೇಳುತ್ತಿದ್ದರು. ಅಥವಾ ಇದೇ ರೀತಿಯ ಬೇರೆ ಧರ್ಮಬದ್ಧ ಉಪಾಯಗಳನ್ನು ಕೈಗೊಳ್ಳುತ್ತಿದ್ದರು. ಪವಿತ್ರ ಖುರ್‌ಆನ್‌ನಲ್ಲಿ ಸೂಚಿಸಿರುವಂತೆ, ಸಹಾಬರು ಕೆಲವು ಸಾರಿ ಹೇಗೆ ಮಾಡುತ್ತಿದ್ದರೆಂದರೆ ಶತ್ರುಗಳನ್ನು ನಿರ್ಲಕ್ಷ್ಯತೆ ಹೊಂದಿದವರನ್ನಾಗಿ ಮಾಡಲು ರಣಾಂಗಣದಿಂದ ಹಿಂದೆ ಸರಿದು ಹೋಗುತ್ತಿದ್ದರು ಮತ್ತು ಶತ್ರುಗಳು ನಿರ್ಲಕ್ಷ್ಯತೆ ಹೊಂದಿದಾಗ ಮತ್ತು ಶತ್ರು ಸೈನ್ಯ ಅಸ್ತವ್ಯಸ್ತ ಸ್ಥಿತಿಯಲ್ಲಿರುವಾಗ ಅಚಾನಕವಾಗಿ ಆಕ್ರಮಣ ಮಾಡುತ್ತಿದ್ದರು. ಇವೆಲ್ಲಾ **ಖದ್‌ಅ**ದ ವಿವಿಧ ರೂಪಗಳಾಗಿವೆ. ಅವು ಯುದ್ಧದ ಕಾಲದಲ್ಲಿ ಧರ್ಮಬದ್ಧವಾಗಿವೆ. ಆದರೆ ಸುಳ್ಳು ಮತ್ತು ವಿದ್ರೋಹವನ್ನು ಇಸ್ಲಾಮ್ ಅತ್ಯಂತ ತೀವ್ರವಾಗಿ ನಿಷಿದ್ಧಗೊಳಿಸುತ್ತದೆ.

*****

اَلْحَمْدُ لِلّٰهِ نَحْمَدُهٗ وَ نَسْتَعِيْنُهٗ وَ نَسْتَغْفِرُهٗ وَنُؤْمِنُ بِهٖ وَ نَتَوَكَّلُ
عَلَيْهِ وَنَعُوْذُ بِاللّٰهِ مِنْ شُرُوْرِ اَنْفُسِنَا وَ مِنْ سَيِّئَاتِ اَعْمَالِنَا مَنْ
يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ فَلَا هَادِيَ لَهٗ - وَنَشْهَدُ اَنْ لَّا
اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ - عِبَادَ اللّٰهِ رَحِمَكُمُ
اللّٰهُ اِنَّ اللّٰهَ يَاْمُرُ بِالْعَدْلِ وَ الْاِحْسَانِ وَ اِيْتَآءِ ذِي الْقُرْبٰى وَ يَنْهٰى
عَنِ الْفَحْشَآءِ وَ الْمُنْكَرِ وَ الْبَغْيِ يَعِظُكُمْ لَعَلَّكُمْ تَذَكَّرُوْنَ
اُذْكُرُوا اللّٰهَ يَذْكُرْكُمْ وَ ادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ -


***Friday Sermon delivered by Hadrath Khaleefatul Masih Al Khamis*** *(atba)*

*At, Masjid Mubarak, Islamabad, Tilford, UK, On 31-01-2020*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim |***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon